

ಬಂಡಿಪುರ ಅರಣ್ಯದಲ್ಲಿ ಆನೆಗಳ ನೀರಾಟ

'ಕೋಸ್ಟರಿಕಾ' ಮಧ್ಯ ಅಮೆರಿಕೆಯಲ್ಲಿರುವ ಪುಟ್ಟ ದೇಶ. ನೈಸರ್ಗಿಕವಾಗಿ ಶ್ರೀಮಂತವಾಗಿದ್ದರೂ ಅರಾಜಕತೆಯಿಂದ ಆ ದೇಶ ಕಂಗೆಟ್ಟಿತ್ತು; ಬಡತನ ಆವರಿಸಿತ್ತು.

'80ರ ದಶಕದಲ್ಲಿ ಆ ದೇಶದ ಚಹರೆ ಬದಲಾಯಿತು. ಕೇವಲ ಡೇರಿ ಉದ್ಯಮವನ್ನೇ ನೆಚ್ಚಿಕೊಂಡು ಬದುಕು ಸಾಗಿಸಿದ್ದ ಆ ದೇಶ 'ಪರಿಸರ ಟೂರಿಸಂ'ಗೆ ಕೈ ಹಾಕಿತು. ವಿಶೇಷವೆಂದರೆ ಆನೆ, ಹುಲಿ, ಸಿಂಹಗಳಿಲ್ಲದ ಆ ದೇಶದ ಕಾಡಿನಲ್ಲಿ ಈ ಉದ್ಯಮಕ್ಕೆ ಮುನ್ನುಡಿ ಬರೆದದ್ದು ಅಲ್ಲಿ ಜೀವಿಸಿದ್ದ 'ಗೋಲ್ಡನ್ ಟೋಡ್' ಎಂಬ ಕಪ್ಪೆ. ಕೇವಲ ಕೋಸ್ಟಾರಿಕಾದಲ್ಲಿ ಜೀವಿಸಿದ್ದ ಅವು ಕಾರಣಾಂತರಗಳಿಂದ ಕೆಲವೇ ವರ್ಷಗಳಲ್ಲಿ ಕಣ್ಮರೆಯಾದವು. ಕಣ್ಮರೆಯಾದ 'ಗೋಲ್ಡನ್ ಟೋಡ್' ಕಪ್ಪೆಗಾಗಿ ಹುಡುಕಾಟ ಆರಂಭವಾಯಿತು. ವಿಜ್ಞಾನಿಗಳು, ಪರಿಸರ ಪ್ರೇಮಿಗಳು ಅವುಗಳನ್ನು ಪತ್ತೆಹಚ್ಚಲು ಹರಸಾಹಸ ಮಾಡಿದರು. ಆದರೆ, ಅಂತಿಮವಾಗಿ 'ಗೋಲ್ಡನ್ ಟೋಡ್' ಕಣ್ಮರೆಯಾಯಿತೆಂದು ತೀರ್ಮಾನಿಸಿದರು. ವಿಶ್ವದ ಅತಿ ಅಪರೂಪದ ಕಪ್ಪೆಯ ವಿಚಾರ ಯೂರೋಪಿನೆಲ್ಲೆಡೆ ಸುದ್ದಿಯಾಯಿತು. ಆಸಕ್ತರು, ಪ್ರವಾಸಿಗರು ಅಲ್ಲಿಗೆ ದೊಡ್ಡ ಸಂಖ್ಯೆಯಲ್ಲಿ ದೌಡಾಯಿಸಿದರು. ಆದರೆ ಆ ಕಪ್ಪೆ ಮತ್ತೆ ಕಾಣಲಿಲ್ಲ.

ಅನಂತರ ಬದಲಾದ ಚಿತ್ರಣವೇ ಬೇರೆ. ಕೋಸ್ಟರಿಕಾ ಪರಿಸರ ಟೂರಿಸಂಗೆ ತನ್ನನ್ನು ತಾನೇ ಅರ್ಪಿಸಿಕೊಂಡಿತು. ಈಗ ವಿಶ್ವದಲ್ಲಿ ಪರಿಸರ ಟೂರಿಸಂನಲ್ಲಿ ಅಗ್ರ ಸ್ಥಾನದಲ್ಲಿರುವ ದೇಶ ಕೋಸ್ಟರಿಕಾ. ಅಲ್ಲಿ ಪ್ರವಾಸಿಗರನ್ನು ರಂಜಿಸುವ ಹುಲಿ,  ಸಿಂಹಗಳಿಲ್ಲ ನಿಜ. ಆದರೆ, ಸದಾ ಮೋಡ ಹೊದ್ದು ಮಲಗಿರುವ ನಿತ್ಯಹರಿದ್ವರ್ಣದ ಕಾಡು, ಅಲ್ಲಿ ಜೀವಿಸಿರುವ ಅಸಂಖ್ಯಾತ ಕೀಟಗಳು, ಹಕ್ಕಿಗಳು ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಈ ಯಶಸ್ಸಿಗೆ ಕಾರಣವಿಷ್ಟೇ. ಕೋಸ್ಟರಿಕಾ ದೇಶದ ಜನ ತಮ್ಮ ನೈಸರ್ಗಿಕ ವೈವಿಧ್ಯತೆಯನ್ನು ಅರ್ಥ ಮಾಡಿಕೊಂಡಿದ್ದು ಮತ್ತು ವ್ಯವಸ್ಥಿತ ಪ್ರವಾಸೋದ್ಯಮಕ್ಕೆ ಅಡಿಪಾಯ ಹಾಕಿದ್ದು. ಪುಟ್ಟ ಪುಟ್ಟ ಜೀವಕೋಟಿಗಳ ನಿಗೂಢ ಬದುಕನ್ನು ಪ್ರವಾಸಿಗರಿಗೆ ತೆರೆದಿದ್ದು.

ಇದೊಂದು ಯಶಸ್ಸಿನ ಕತೆ. ಕಾಡುಗಳನ್ನು ಸವರಿ ಕಲ್ಲಿದ್ದಲು ಮಾಡುವ ಸಂಪ್ರದಾಯವಿದ್ದ ಆ ದೇಶ ಆ ಉದ್ಯಮಕ್ಕೆ ತೆರೆ ಎಳೆಯಿತು. ಅದೊಂದು ಬುದ್ಧಿವಂತಿಕೆಯ ನಿರ್ಧಾರವಾಗಿತ್ತು. ಗಣಿಗಳನ್ನು ಕೊರೆದು, ನೈಸರ್ಗಿಕ ಸಂಪತ್ತನ್ನು ಮಾರಿ ಹಣ ಸಂಪಾದಿಸುವುದು ತಪ್ಪೆಂದು ಅವರಿಗೆ ಮನವರಿಕೆಯಾಗಿತ್ತು. ಹಾಗಾಗಿ, ಶಾಶ್ವತ ಆದಾಯ ತರುವ ಪರಿಸರ ಪ್ರವಾಸೋದ್ಯಮದತ್ತ ಅವರ ಪಯಣ ಸಾಗಿತು. ಪರಿಸರ ಟೂರಿಸಂ ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿತು. ಉದ್ಯಮದಿಂದ ಗಳಿಸಿದ ಆದಾಯವನ್ನು ಸ್ಥಳೀಯ ಜನರ ಏಳಿಗೆಗಾಗಿ ವ್ಯಯಿಸಲಾಯಿತು. ಈಗ ಇದೇ ಕೋಸ್ಟರಿಕಾ ಅತ್ಯಂತ ನೆಮ್ಮದಿಯಿಂದ ಬದುಕುತ್ತಿರುವ ದೇಶ. ಮಲಿನವಿಲ್ಲದ ಉದ್ಯಮದಲ್ಲಿ ತೊಡಗಿಸಿಕೊಂಡು ಅಭಿವೃದ್ಧಿಯತ್ತ ಸಾಗುತ್ತಿದೆ.

ಅಚ್ಚರಿ ಎಂಬಂತೆ, ಇಲ್ಲಿನ ಜನರೇ ಮುಂಚೂಣಿ ವಹಿಸಿ ಈ ಉದ್ಯಮವನ್ನು ಪೋಷಿಸಿದರು. ಹತ್ತಾರು ಆಸಕ್ತರು ಒಂದೆಡೆ ಸೇರಿ ಕಾಡಂಚಿನಲ್ಲಿ ಸಾವಿರಾರು ಎಕರೆ ಭೂಮಿಯನ್ನು ಕೊಂಡು, ಅರಣ್ಯ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡರು. ಸರ್ಕಾರವೂ ಬೆಂಬಲಿಸಿತು. ಸ್ಥಳೀಯರಿಗೆ ಉದ್ಯೋಗ ಸಿಕ್ಕವು. ಪ್ರವಾಸೋದ್ಯಮದ ಆದಾಯವೂ ಸ್ಥಳೀಯವಾಗೇ ಬಳಕೆಯಾಯಿತು; ಗ್ರಾಮ ಪಂಚಾಯಿತಿಗಳು ಸುಧಾರಣೆಗೊಂಡವು. ದೇಶ ಶ್ರೀಮಂತಿಕೆಯತ್ತ ಸಾಗಿತು. ಲೆಕ್ಕವಿಲ್ಲದಷ್ಟು ಆಂತರಿಕ ಸಮಸ್ಯೆಗಳಿಂದ ಬಳಲುತ್ತಿದ್ದ ಆ ರಾಷ್ಟ್ರ ಇದ್ದಕ್ಕಿದ್ದ ಹಾಗೆ ಸಬಲಗೊಂಡಿತು. ಮುಂದುವರಿದ, ಮುಂದುವರಿಯುತ್ತಿರುವ ರಾಷ್ಟ್ರಗಳು